## ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

ದಿ: 15-07-2016

ಸಂ:ಕಂ:.ವಿವಾದ:182/2014-15

ಉಪಸ್ಥಿತರು: ಬಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

ಈರಮ್ಮ ಗಂಡ: ಲೇಟ್ ಮಲ್ಲನಗೌಡ
ಮುದೇನೂರು ಗ್ರಾಮ ಸಿರುಗುಪ್ಪ ತಾಲೂಕ

**ಪ್ರತಿವಾದಿಗಳು**

ಮಲ್ಲನಗೌಡ ತಂದೆ: ವೀರನಗೌಡ
ಶ್ರೀಧರಗಡ್ಡೆ ಗ್ರಾಮ ಬಳ್ಳಾರಿ ತಾಲೂಕ

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ವಹಿವಾಟು ಸಂಖ್ಯೆ |
|---|---|---|---|---|
| ಮುದೇನೂರು ಗ್ರಾಮ | 148/B4 | 2-16 | H-10/2014-15 | 35/2014-15 |

**ಪೀಠಿಕೆ:-**

ಸಿರುಗುಪ್ಪ ತಾಲೂಕಿನ **ಮುದೇನೂರು ಗ್ರಾಮದ ಸ.ನಂ.148/B4** ವಿಸ್ತೀರ್ಣ2-16 ಎಕರೆಜಮೀನಿಗೆ ಸಂಭಂದಿಸಿದಂತೆ **ಪೋತಿ ವಾರಸತ್ವ ಪ್ರಕಾರ ಈರಮ್ಮ ಗಂಡ: ಲೇಟ್ ಮಲ್ಲನಗೌಡ** ಇವರ **ಹೆಸರಿನಲ್ಲಿ** ಖಾತೆಬದಲಾವಣೆ ಮಾಡಲು ನಮೂನೆ -21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ **ಮಲ್ಲನಗೌಡ ತಂದೆ: ವೀರನಗೌಡ, ಶ್ರೀಧರ ಗಡ್ಡೆ ಗ್ರಾಮ ಬಳ್ಳಾರಿ ತಾಲೂಕ** ಇವರು ದಿ:29-10-2014 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನು ದಿ:21-08-2014, 18-09-2015, 13-05-2016, 08-07-2016 ಮತ್ತು 15-07-2016 ರಂದು **ಪ್ರಕರಣಕ್ಕೆ** ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ಳು

ವಾದಿಗಳಾದ ಶ್ರೀಮತಿ: ಈರಮ್ಮ ಗಂಡ: ಲೇಟ್ ಮಲ್ಲನಗೌಡ ಮುದೇನೂರು ಗ್ರಾಮ ಇವರು ಮುದೇನೂರು ಗ್ರಾಮದ ಸ.ನಂ.148/B4 ವಿಸ್ತೀರ್ಣ2-16ಎಕರೆ ಜಮೀನು ನನ್ನ ಗಂಡನ ತಂದೆ: ಪಂಪನಗೌಡ ತಂದೆ: ಮಲ್ಲನಗೌಡ ಹೆಸರಿನಿಂದ ನನ್ನ ಹೆಸರಿಗೆ ಜಮೀನು ವರ್ಗಾವಣೆ ಸಂದರ್ಭದಲ್ಲಿ ಮಲ್ಲನಗೌಡ ತಂದೆ: ವೀರನಗೌಡ ಶ್ರೀಧರಗಡ್ಡೆಗ್ರಾಮ ಬಳ್ಳಾರಿ ತಾಲೂಕ ಇವರು ವಿನಾಕಾರಣ ಆಧಾರ ರಹಿತವಾಗಿ ತಕರಾರು ಅರ್ಜಿಸಲ್ಲಿಸಿದ್ದು ಇದುವರೆಗೂ ವಿಚಾರಣೆಗೆ ಹಾಜರಾಗಿರುವುದಿಲ್ಲ. ಅಥವಾ ಯಾವುದೇ ಲಿಖಿತ ಹೇಳಿಕೆಗಳನ್ನು ಸಲ್ಲಿಸಿರುವುದಿಲ್ಲ ಆದ್ದರಿಂದ ಅವರ ತಕರಾರು ಅರ್ಜಿಯನ್ನು ತಳ್ಳಿ ಹಾಕುತ್ತಾ ಈಗ ನನಗೆ ಸುಮಾರು 80 ವರ್ಷ ವಯಸ್ಸಿದ್ದು ನನ್ನ ಮಗನ ಹೆಂಡತಿಯಾದ ಚಂದ್ರಕಳಾ ಗಂಡ: ಕುಮಾರ ಗೌಡ ಇವರ ಹೆಸರಿಗೆ ಪೋತಿ ಆಧಾರದ ಮೇಲೆ ವರ್ಗಾವಣೆ ಮಾಡಲು ನನ್ನ ಯವುದೇ ಆಕ್ಷೇಪಣೆ ಇರುವುದಿಲ್ಲವೆಂದು ಪ್ರಮಾಣಪತ್ರ ಸಲ್ಲಿಸಿರುತ್ತಾರೆ. ಹಾಗೂ ಚಂದ್ರಕಳಾ ಗಂಡ: ಕುಮಾರಗೌಡ ಇವರು ಸದರಿ ಜಮೀನು ನನ್ನ ಅತ್ತೆಯಾದ ಶ್ರೀಮತಿ: ಈರಮ್ಮ ಗಂಡ: ಲೇಟ್ ಮಲ್ಲನಗೌಡ ಇವರು ಪೋತಿ ಆಧಾರದ ಮೇರೆಗೆ ವರ್ಗಾವಣೆಗಾಗಿ ಸಲ್ಲಿಸಿದ ಸಂದರ್ಭದಲ್ಲಿ ಮಲ್ಲನಗೌಡ ತಂದೆ: ವೀರನಗೌಡ ಶ್ರೀಧರಗಡ್ಡೆ ಗ್ರಾಮ ಬಳ್ಳಾರಿ ತಾಲೂಕ ಇವರು ವಿನಾಕಾರಣ ಆಧಾರ ರಹಿತವಾಗಿ ತಕರಾರು ಅರ್ಜಿ ಸಲ್ಲಿಸಿದ್ದು ಇದುವರೆಗೂ ವಿಚಾರಣೆಗೆ ಹಾಜರಾಗಿರುವುದಿಲ್ಲ ಅಥವಾ ಯಾವುದೇ ಲಿಖಿತ ಹೇಳಿಕೆಗಳನ್ನು ಸಲ್ಲಿಸಿರುವುದಿಲ್ಲ ಅಲ್ಲದೇ ನನ್ನ ಅತ್ತೆಯಾದ ಶ್ರೀಮತಿ: ಈರಮ್ಮ ಗಂಡ:ಲೇಟ್‌ಮಲ್ಲನಗೌಡ ಇವರಿಗೆ 80ವರ್ಷ ವಯಸ್ಸಿದ್ದು ವೃದ್ಧಾಪ್ಯ ಆವರಿಸಿರುವುದರಿಂದ ಇವರ ಮಗನ ಹೆಂಡತಿಯಾದ ನಾನು ಅಂದರೆ ಚಂದ್ರಕಳಾ ಗಂಡ: ಕುಮಾರ ಗೌಡ ನನ್ನ ಹೆಸರಿಗೆ ಪೋತಿ ಆಧಾರದ ಮೇರೆಗೆ ವರ್ಗಾವಣೆ ಮಾಡಲು ಈರಮ್ಮ ಇವರು ಸಹಒಪ್ಪಿ ಪ್ರಮಾಣಪತ್ರ ಸಲ್ಲಿಸಿರುವುದರಿಂದ ನನ್ನ ಹೆಸರಿಗೆ ಪೋತಿ ಆಧಾರದ ಮೇರೆಗೆ ಹಕ್ಕು ಬದಲಾವಣೆ ಮಾಡಲು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

## ಪ್ರತಿವಾದಿಗಳು

ಪ್ರತಿವಾದಿಗಳಾದ.ಮಲ್ಲನಗೌಡ ತಂದೆ:ವೀರನಗೌಡ, ಶ್ರೀಧರಗಡ್ಡೆಗ್ರಾಮ ಬಳ್ಳಾರಿ ತಾಲೂಕ ಇವರು ಮುದೇನೂರುಗ್ರಾಮದ ಸ.ನಂ.148/B4 ವಿಸ್ತೀರ್ಣ 2-16 ಎಕರೆ ಜಮೀನು ಪೊಂಪನಗೌಡ ತಂದೆ: ಮಲ್ಲನಗೌಡ ಇವರಿಂದ ಈರಮ್ಮ ಗಂಡ: ಲೇಟ್ ಮಲ್ಲನಗೌಡ ಇವರ ಹೆಸರಿಗೆ ಪೋತಿ ಪಟ್ಟ ವರ್ಗಾವಣೆ ಸಂದರ್ಭದಲ್ಲಿ ದಿ:29-10-2014 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ದಿ:21-08-2015, 18-09-2015, 13-05-2016, 08-07-2016, 15-07-2016 ರಂದು ವಿಚಾರಣೆಗೆ ಹಾಜರಾಗಲು ನೋಟೀಸ್ ನೀಡಿದಾಗ್ಯೂ ಹಾಜರು ಆಗಿರುವುದಿಲ್ಲ. ಹಾಗೂ ಯಾವುದೇ ಲಿಖಿತ ಹೇಳಿಕೆಗಳನ್ನು ಸಹ ಸಲ್ಲಿಸಿರುವುದಿಲ್ಲ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು ಪೋತಿ ವಾರಸತ್ವ ಪ್ರಕಾರ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಮುದೇನೂರು ಗ್ರಾಮದ ಸ.ನಂ. 148/B4 ವಿಸ್ತೀರ್ಣ 2-16 ಸೆಂಟ್ಸ್ ಜಮೀನು ಪೋತಿ ವಾರಸತ್ವ ಪ್ರಕಾರ ಚಂದ್ರಕಳಾ ಗಂಡ: ಕುಮಾರ ಗೌಡ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 15-07-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು,
ಕರೂರು.

ಇದರ ಪ್ರತಿಯನು: